**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ರಾಜ್ಯದಲ್ಲಿ ಯಾವುದೇ ನರ್ಸಿಂಗ್ ಶಾಲೆಗಳನ್ನು ಹೊಸದಾಗಿ ಪ್ರಾರಂಭಿಸುವ/ ಪ್ರವೇಶ ಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆಗಳ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವುದನ್ನು ತಡೆಹಿಡಿಯುವ ಬಗ್ಗೆ.

**ಓದಲಾಗಿದೆ** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಟಿಪ್ಪಣಿ ಸಂಖ್ಯೆ:ಆಕುಕ & ವೈಶಿಸ 289/2022, ದಿನಾಂಕ:07.04.2022

**ಪ್ರಸ್ತಾವನೆ**:

ಮೇಲೆ ಓದಲಾದ ದಿನಾಂಕ:07.04.2022ರ ಟಿಪ್ಪಣಿಯಲ್ಲಿ, ರಾಜ್ಯದಲ್ಲಿ ನರ್ಸಿಂಗ್ ಶಾಲೆಗಳನ್ನು ಹೊಸದಾಗಿ ಪ್ರಾರಂಭಿಸುವ / ಪ್ರವೇಶಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನಮಂಡಲದ ವಿಶೇಷ ಜಂಟಿ ಸದನ ಸಮಿತಿಯು ರಚನೆಯಾಗಿರುತ್ತದೆ. ಅಲ್ಲದೇ, ಕೆಲವು ನರ್ಸಿಂಗ್ ಶಾಲೆಗಳ ಕಾರ್ಯವೈಖರಿ ಹಾಗೂ ಮೂಲಸೌಲಭ್ಯಗಳ ಬಗ್ಗೆ ಮಾನ್ಯ ವಿಧಾನಮಂಡಲ ಸದಸ್ಯರುಗಳು ಸದನದಲ್ಲಿ ಕಳವಳ ವ್ಯಕ್ತಪಡಿಸಿರುತ್ತಾರೆ. ಈ ಸಂಬಂಧ ಹಾಲಿ ನಿಯಮಗಳು, ನರ್ಸಿಂಗ್ ಶಾಲೆಗಳ ಕಾರ್ಯವೈಖರಿ & ಮೂಲಭೂತ ಸೌಕರ್ಯಗಳಲ್ಲಿನ ಲೋಪದೋಷಗಳ ಕುರಿತು ಪರಿಶೀಲಿಸಿ ನಂತರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ, ಮುಂದಿನ ಆದೇಶದವರೆಗೆ ರಾಜ್ಯದಲ್ಲಿ ಯಾವುದೇ ನರ್ಸಿಂಗ್ ಶಾಲೆಗಳನ್ನು ಹೊಸದಾಗಿ ಪ್ರಾರಂಭಿಸುವ/ಪ್ರವೇಶಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆಗಳ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡುವುದನ್ನು ತಡೆಹಿಡಿಯುವಂತೆ ಸೂಚಿಸಲಾಗಿದೆ.

ಯಾವುದೇ ನರ್ಸಿಂಗ್ ಕೋರ್ಸುಗಳ ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ Indian Nursing Council ರವರು ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದೆ. ಅದರಂತೆ INC ಪತ್ರ ಸಂಖ್ಯೆ:1-6/2018-INC, ದಿನಾಂಕ:20.04.2018 ರಲ್ಲಿ ಯಾವುದೇ ನರ್ಸಿಂಗ್ ಶಾಲೆಗಳನ್ನು ಪ್ರಾರಂಭಿಸಲು ಲಭ್ಯವಿರಬಹುದಾದ Teaching Block, Laboratories, Multipurpose Hall, Library, Offices requirements, Hostel Block, Clinical facilities ಮತ್ತಿತರೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಬೇಕಾಗಿರುವುದು ಕಡ್ಡಾಯವಾಗಿರುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ನರ್ಸಿಂಗ್ ಕೋರ್ಸುಗಳ ಪ್ರವೇಶಾತಿಗೆ ಅನುಮತಿ ಕೋರಿ ಸರ್ಕಾರಕ್ಕೆ ಸಲ್ಲಿಸುತ್ತಿರುವ ಅರ್ಜಿಗಳನ್ನು ಅವಲೋಕಿಸಿದಾಗ INC ನಿಗಧಿಪಡಿಸಿದ ಮಾರ್ಗಸೂಚಿಗಳಲ್ಲಿನ ಮಾನದಂಡಗಳನ್ನು ಪರಿಪೂರ್ಣವಾಗಿ ಪಾಲಿಸದೇ ಸರ್ಕಾರದ ಅನುಮತಿಯನ್ನು ಕೋರುತ್ತಿರುವುದು ಬಿಂಬಿತವಾಗುತ್ತಿದೆ. ಅಲ್ಲದೆ ಮೂಲಭೂತ ಸೌಕರ್ಯಗಳನ್ನು ಹಾಗೂ ಇತರೆ ಅಂಶಗಳನ್ನು ಅನುಮತಿ ಪಡೆದಿರುವ ಶಾಲಾ ಕಾಲೇಜುಗಳೂ ಸಹ ಮುಂದುವರೆಸಿಕೊಂಡು ಹೋಗದಿರುವುದನ್ನು ಮನಗಂಡು ಮಾನ್ಯ ವಿಧಾನಮಂಡಲದ ಸದಸ್ಯರುಗಳು ಸದನದಲ್ಲಿ ಕಳವಳ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ನರ್ಸಿಂಗ್ ಕಾಲೇಜು ಮತ್ತು ಅಲೈಡ್ ಹೆಲ್ತ್ ಸೈನ್ಸ್ಸ್ ಕೋರ್ಸುಗಳ ಸಂಬಂಧ ವಿಶೇಷ ಜಂಟಿ ಸದನ ಸಮಿತಿಯನ್ನು ಕರ್ನಾಟಕ ವಿಧಾನಪರಿಷತ್ತು ರಚಿಸಿದ್ದು, ಹಾಲಿ ಹೊಸ ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯಲ್ಲಿ ಆಗುತ್ತಿರುವ ಆಡಳಿತಾತ್ಮಕ ಲೋಪದೋಷಗಳು/ನ್ಯೂನತೆಗಳು ಬಗ್ಗೆ ಸವಿಸ್ತಾರವಾಗಿ ಪರಿಶೀಲಿಸಿ ವಿವರವಾದ ವರದಿಯನ್ನು ಸಲ್ಲಿಸಲು ನಿರ್ದೇಶಿಸಲಾಗಿರುತ್ತದೆ.

20-5-2022

ಅದೇ ರೀತಿಯಾಗಿ ಹೊಸ ನರ್ಸಿಂಗ್ ಶಾಲೆಗಳಿಗೆ (GNM) ಅನುಮತಿ ನೀಡುವ ಸಂದರ್ಭದಲ್ಲಿ INC ಯ ಮಾರ್ಗಸೂಚಿಗಳನ್ನು ಅನುಸರಿಸುತ್ತಿರುವುದರಿಂದ, ನರ್ಸಿಂಗ್ ಶಾಲೆ ಮತ್ತು ನರ್ಸಿಂಗ್ ಕಾಲೇಜುಗಳಿಗೆ INC ಯ ಮಾರ್ಗಸೂಚಿಗಳು ಬಹುತೇಕ ಸಾಮ್ಯತೆ ಹೊಂದಿರುತ್ತವೆ. ಆದುದರಿಂದ ಈಗಾಗಲೇ ಹೊಸ ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯ ಸುಧಾರಣೆಗೆ ಸಂಬಂಧಪಟ್ಟಂತೆ ರಚಿಸಿರುವ ವಿಶೇಷ ಜಂಟಿ ಸದನ ಸಮಿತಿಯು ನೀಡಬಹುದಾದ ವರದಿಯಲ್ಲಿನ ಶಿಫಾರಸ್ಸುಗಳನ್ನು GNM ಶಾಲೆಗಳಿಗೂ ಸಹ ಅನ್ವಯಿಸುವುದು ಆಡಳಿತಾತ್ಮಕ ಹಿತದೃಷ್ಟಿಯಿಂದ ಸೂಕ್ತವೆಂದು ಭಾವಿಸಿ, ರಾಜ್ಯದಲ್ಲಿ ಯಾವುದೇ ಹೊಸ ನರ್ಸಿಂಗ್ ಶಾಲೆಗಳಿಗೆ (GNM) ಹೊಸದಾಗಿ ಪ್ರಾರಂಭಿಸುವ/ಪ್ರವೇಶ ಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆಗಳ ಪ್ರಕರಣಗಳಿಗೆ ಅನುಮತಿ ನೀಡುವ ಪ್ರಕ್ರಿಯೆಗೆ ಸರ್ಕಾರದ ಮುಂದಿನ ಆದೇಶದವರೆಗೂ ತಡೆಹಿಡಿಯುವುದು ಹಾಗೂ ಇದನ್ನು ಸರ್ಕಾರ ಹಾಗೂ ಇತರೆ ಪ್ರಾಧಿಕಾರಗಳಲ್ಲಿ ಅನುಮತಿಗಾಗಿ ಬಾಕಿ ಇರುವ ಪ್ರಕರಣಗಳಿಗೂ ಸಹ ಅನ್ವಯಿಸುವುದು ಸೂಕ್ತವೆಂದು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಎಂಇಡಿ 211 ಎಂಎಸ್‌ಎಫ್ 2022, ಬೆಂಗಳೂರು**
**ದಿನಾಂಕ:20.05.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಯಾವುದೇ ನರ್ಸಿಂಗ್ ಶಾಲೆಗಳಿಗೆ (GNM) ಹೊಸದಾಗಿ ಪ್ರಾರಂಭಿಸುವ/ಪ್ರವೇಶ ಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆಗಳ ಪ್ರಕರಣಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ.

ಈ ಆದೇಶವು ಸರ್ಕಾರ ಹಾಗೂ ಇತರೆ ಪ್ರಾಧಿಕಾರಗಳಲ್ಲಿ ಅನುಮತಿಗಾಗಿ ಬಾಕಿ ಇರುವ ಪ್ರಕರಣಗಳಿಗೂ ಸಹ ಅನ್ವಯಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

20-5-2022

**(ಎಂ.ಜ್ಯೋತಿ ಪ್ರಕಾಶ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ವೈದ್ಯಕೀಯ ಶಿಕ್ಷಣ ಇಲಾಖೆ.

**ಇವರಿಗೆ:**

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ವಿಶೇಷಾಧಿಕಾರಿಗಳು, ಕರ್ನಾಟಕ ಶುಶ್ರೂಷಾ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ, ಬೆಂಗಳೂರು.
3. ರಿಜಿಸ್ಟ್ರಾರ್, ಕರ್ನಾಟಕ ನರ್ಸಿಂಗ್ ಕೌನ್ಸಿಲ್, ಎ.ಆರ್.ಬಡಾವಣೆ, ಗಾಂಧಿನಗರ, ಬೆಂಗಳೂರು.
4. ಶಾಖಾ ಕಡತ/ಹೆಚ್ಚುವರಿ ಪ್ರತಿ

**ಪ್ರತಿ:**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಅಧೀನ ಕಾರ್ಯದರ್ಶಿ-1 & 3, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ,
4. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ